<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು (ಪ್ರದನ್ಯಾದಂ.), ರವರ ನ್ಯಾಯಾಲಯಃ ನ.ರಾ.ಪುರ</u>

**ಸಿ.ಸಿ. ನಂಃ *64/2019***

ಫಿರ್ಯಾದುದಾರರು : ಶ್ರೀ. ಬಾಬು ಕೆ.ಪಿ., ಬಿನ್. ಪತ್ರೋಸ್,
45 ವರ್ಷ, ವ್ಯವಸಾಯ ವೃತ್ತಿ, ವಾಸಃ ನಾಗರಹಡ್ಲು,
ಬಿ.ಹೆಚ್. ಕೈಮರ ಅಂಚೆ, ನ.ರಾ.ಪುರ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

:ವಿಃ

ಆರೋಪಿ : ಶ್ರೀ. ಅಭಿಷೇಕ್ ಎ.ಎಸ್., ಬಿನ್. ಸದಾನಂದ ಪೂಜಾರಿ,
35 ವರ್ಷ, ವ್ಯವಸಾಯ ಮತ್ತು ವ್ಯಾಪಾರ ವೃತ್ತಿ,
ವಾಸಃ ಹಿರೇಕೊಡಿಗೆ ಗ್ರಾಮ, ಗಡಿಕಲ್ ಅಂಚೆ,
ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

-----

<u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ **313**ರ ಪ್ರಕಾರ ಆರೋಪಿ ಹೇಳಿಕೆ</u>

ಪ್ರಃ1: ಪಿಡಬ್ಲ್ಯೂ 1 ಬಾಬು ಕೆ.ಪಿ. ಹೇಳುತ್ತಾರೆ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವು ಆರೋಪಿ 2018 ನೇ ಇಸವಿ ಆಗಸ್ಟ್ ತಿಂಗಳ 2 ನೇ ವಾರದಲ್ಲಿ ಅವರಿಂದ 27,000/- ರೂ.ಗಳನ್ನು ಕೈ ಸಾಲವಾಗಿ ಪಡೆದುಕೊಂಡಿರುತ್ತೀರಿ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ ಸುಳ್ಳು

ಪ್ರಃ2: ಅವರು ಮುಂದುವರಿದು ಹೇಳುತ್ತಾರೆ, ನಂತರ ಸದರಿ ಸಾಲದ ಮರುಪಾವತಿಗಾಗಿ 27,000/- ರೂ.ಗಳ 14.11.2018 ನೇ ದಿನಾಂಕವನ್ನು ನಮೂದಿಸಿರುವ 322058 ನೇ ಸಂಖ್ಯೆಯ, ಕಾರ್ಪೋರೇಷನ್ ಬ್ಯಾಂಕ್, ಕೊಪ್ಪ ಶಾಖೆಯ ಒಂದು ಚೆಕ್ ನಿಪಿ 1 ನ್ನು ಅವರಿಗೆ ಕೊಟ್ಟಿರುತ್ತೀರಿ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ ಸುಳ್ಳು

ಪ್ರಃ3: ಅವರು ಮುಂದುವರಿದು ಹೇಳುತ್ತಾರೆ, ನಂತರ ಸದರಿ ಚೆಕ್ಕನ್ನು ಅವರು ಜಮಾವಣೆಗಾಗಿ ಬ್ಯಾಂಕಿನಲ್ಲಿ ಹಾಜರುಪಡಿಸಿದಾಗ ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹ ನಿಪಿ 2 ರೊಂದಿಗೆ ಅದನ್ನು ವಾಪಾಸು ಮಾಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ ಸುಳ್ಳು

Abhishek A S

ಪ್ರಃ4: ಅವರು ಮುಂದುವರಿದು ಹೇಳುತ್ತಾರೆ, ನಂತರ ಈ ಬಗ್ಗೆ ನಿಮಗೆ ವಕೀಲರ ಮೂಲಕ ನಿಪಿ 5 ರಂತೆ ನೋಟೀಸನ್ನು ಕೊಟ್ಟಿದ್ದು, ನೀವು ಆರೋಪಿ ಸದರಿ ನೋಟೀಸನ್ನು ಸ್ವೀಕರಿಸಿರುವುದಿಲ್ಲ ಹಾಗೂ ಚೆಕ್ಕಿನಲ್ಲಿ ಒಳಗೊಂಡ ಹಣವನ್ನು ಸಹಾ ಮರುಪಾವತಿ ಮಾಡಿರುವುದಿಲ್ಲ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ ಸುಳ್ಳು

ಪ್ರಃ5: ಅವರು ಮುಂದುವರಿದು ಹೇಳುತ್ತಾರೆ, ನೀವು ಆರೋಪಿ ಮೋಸ ಮಾಡಬೇಕೆನ್ನುವ ಉದ್ದೇಶದಿಂದಲೇ ಈ ರೀತಿಯ ಚೆಕ್ಕನ್ನು ಅವರಿಗೆ ನೀಡಿರುತ್ತೀರಿ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ ಸುಳ್ಳು

ಪ್ರಃ6: ನಿಮಗೆ ಈ ಪ್ರಕರಣದ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ?

ಉ : ಇಲ್ಲ.

Abu?M Af

ಪ್ರಃ7 : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉ :

ಸಾಕ್ಷಿ ಇವೆ.

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 9 ನೇ ದಿವಸ, ಮಾರ್ಚ್ ಮಾಹೆ, 2026.

9/3/26

(ಜೀತು ಆರ್.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ನ.ರಾ. ಪುರ.

Abusmuats